# ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ:ಎ7/ಎಲ್ಎನ್‌ಡಿ/ಅ(ಸಂ)ಪ್ರ/ಬಿಜಿಎಂ/ಎನ್‌ಕೆಜಿ/ಸಿಆರ್- /2020-21

ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬೆಳಗಾವಿ ವೃತ್ತ, ಬೆಳಗಾವಿ
ದಿನಾಂಕ: 04-12-2020

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಳಗಾವಿ ವಿಭಾಗ,
ಬೆಳಗಾವಿ.

ವಿಷಯ: Construction of Foot Bridge across a local Nala on alternative pathway connecting from Nersa cillage to Kongala and Gavali village in Khanapur taluka.

ಉಲ್ಲೇಖ:1) ನಿಮ್ಮ ಕಛೇರಿ ಪತ್ರ ಸಂಖ್ಯೆ: ಡಿ1/ಲ್ಯಾಂಡ್/ಎಫ್.ಸಿ-40060/ಸಿಆರ್-07/2020-21/ 2472 ದಿನಾಂಕ: 19-09-2020.

** * **

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಡಿಯಲ್ಲಿ ಸಲ್ಲಿಸಿರುವ ಆನ್‌ಲೈನ್ ಪ್ರಸ್ತಾವಣೆಯನ್ನು ಪರಿಶೀಲಿಸಿದ್ದು ಹಾಗೂ ದಿನಾಂಕ: 02-12-2020 ರಂದು ಪ್ರಸ್ತಾಪಿತ ಅರಣ್ಯ ಪ್ರದೇಶವನ್ನು ಪರಿಶೀಲಿಸಲಾಗಿ, ಈ ಕೆಳಕಂಡಂತೆ ನ್ಯೂನ್ಯತೆಗಳು ಕಂಡುಬಂದಿರುತ್ತವೆ.

1. ಉಪಯೋಗಿ ಸಂಸ್ಥೆಯವರು ಬೇಡಿಕೆ ಸಲ್ಲಿಸಿರುವ ಅರಣ್ಯ ಪ್ರದೇಶದ ಗಡಿ ಗುರುತುಗಳನ್ನು ಸ್ಥಾನಿಕವಾಗಿ ಗುರುತಿಸಿದ್ದು ಇರುವುದಿಲ್ಲ.
2. ಪ್ರಸ್ತಾಪಿತ ಅರಣ್ಯ ಪ್ರದೇಶವು ಆನೆ ಕಾರಿಡಾರ ಪ್ರದೇಶದಲ್ಲಿ ಬರುವುದಿಲ್ಲವೆಂದು ತಿಳಿಸಿರುತ್ತೀರಿ, ಆದರೆ ನೆರಸಾ ಅರಣ್ಯ ಪ್ರದೇಶವು ಆನೆ ಕಾರಿಡಾರ ಪ್ರದೇಶದಲ್ಲಿ ಬರುತ್ತದೆ.
3. ಪ್ರಸ್ತಾಪಿತ ಅರಣ್ಯ ಪ್ರದೇಶವು ಭೀಮಗಡ ವನ್ಯಜೀವಿ ಧಾಮದ ಸೂಕ್ಷ್ಮ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ತಿಳಿಸಿರುತ್ತೀರಿ, ಆದರೆ ಸದರ ವನ್ಯಜೀವಿ ಧಾಮದ ಸೂತ್ತಲು 10 ಕಿ.ಮೀ ವ್ಯಾಪ್ತಿ ಮಾನ್ಯ ಸರ್ವೋಚ್ಛ ನ್ಯಾಯಾಲಯ ಆದೇಶದ ಪ್ರಕಾರ ಸೂಕ್ಷ್ಮ ಅರಣ್ಯ ಪ್ರದೇಶವೆಂದು ಪರಿಗಣಿಸಲಾಗಿರುತ್ತದೆ. ಈ ಬಗ್ಗೆ ಪ್ರಸ್ತಾವನೆಯನ್ನು ಮರು ಪರಿಶೀಲಿಸುವುದು.
4. ಉಪಯೋಗಿ ಸಂಸ್ಥೆಯವರು ಕಾಮಗಾರಿವಾರು ಸಲ್ಲಿಸಿರುವ ಅರಣ್ಯ ಪ್ರದೇಶದ ವಿವರಕ್ಕೆ ವಲಯ ಅರಣ್ಯ ಅಧಿಕಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ದೃಢೀಕರಿಸಿ ಸಲ್ಲಿಸಿದ್ದು ಇರುವುದಿಲ್ಲ.
5. ಜಿಲ್ಲಾಧಿಕಾರಿಗಳಿಂದ ಸದರಿ ಕಾಮಗಾರಿಗೆ ಅರಣ್ಯ ಪ್ರದೇಶ ಹೊರತು ಪಡಿಸಿ ಅರಣ್ಯೇತರ ಪ್ರದೇಶ ಇಲ್ಲದೇ ಇರುವ ಬಗ್ಗೆ ಪ್ರಮಾಣ ಪತ್ರ ಪಡೆದು ಸಲ್ಲಿಸಿದ್ದು ಇರುವುದಿಲ್ಲ.
6. ಉಪಯೋಗಿ ಸಂಸ್ಥೆಯವರು ಎಫ್.ಆರ್.ಎ. ಪ್ರಮಾಣ ಪತ್ರವನ್ನು ನಂತರದಲ್ಲಿ ಸಲ್ಲಿಸುವುದಾಗಿ ಮುಚ್ಚಳಿಕೆ ಪತ್ರವನ್ನು ಬರೆದು ಕೊಟ್ಟಿರುವುದಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ದೃಢೀಕರಿಸಿ ಸಲ್ಲಿಸಿದ್ದು ಇರುವುದಿಲ್ಲ.

ಅಲ್ಲದೇ ನೀವು ಶಿಫಾರಸ್ಸು/ಸ್ಥಳ ಪರಿಶೀಲನಾ ವರದಿಯಲ್ಲಿ ಉಪಯೋಗಿ ಸಂಸ್ಥೆಯವರು ಒಂದು ಸೇತುವೆ ನಿರ್ಮಾಣ ಮಾಡುವುದಾಗಿ ನಮೂದಿಸಿರುತ್ತೀರಿ, ಆದರೆ ಉಪಯೋಗಿ ಸಂಸ್ಥೆಯವರು ಎರಡು ಸೇತುವೆಯನ್ನು ನಿರ್ಮಾಣ ಮಾಡುವುದಾಗಿ ನಕಾಶೆಯಿಂದ ಹಾಗೂ ಸ್ಥಳ ಪರಿಶೀಲನೆಯಿಂದ ತಿಳಿದು ಬಂದಿರುತ್ತದೆ. ಕಾರಣ, ಈ ಬಗ್ಗೆ ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಲು ಸೂಚಿಸುತ್ತಾ ಉಲ್ಲೇಖಿತ ಪತ್ರದಡಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಈ ಪತ್ರಕ್ಕೆ ಲಗತ್ತಿಟ್ಟು ಮರಳಿಸಲಾಗಿದೆ.

ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವೃತ್ತ, ಬೆಳಗಾವಿ.

BGK DCF_Ltr_A7_2020-21 RaghuAsha- 1